C.R.P.67

| Form No.4 (Civil) Deposition Sheets (R.P.No.57) |
|---|

## **2**ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

## ಎಸ್ ಸಿ ಸಂಖ್ಯೆಃ 32/2025

ಪ್ರಾಸಾ. 04 ಚಾಸಾ. 05

| | |
|---|---|
| ಸಾಕ್ಷಿದಾರರ ಹೆಸರು | ಕಮಲಮ್ಮ |
| ಗಂಡನ ಹೆಸರು | ಹ್ಯಾಮಗಿರಿಗೌಡ |
| ವಯಸ್ಸು | 60 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ಹೊಸಕೊಪ್ಪಲು |

**ಸಾಕ್ಷಿಯನ್ನು ದಿನಾಂಕಃ15.06.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ರಿಂದ 4 ನನ್ನ ಸಂಬಂಧಿಕರು. ನಮ್ಮ ಜಮೀನು ಚಾಸಾ-1 ರಿಂದ 4 ರವರ ಜಮೀನಿನ ಹತ್ತಿರದಲ್ಲಿರುತ್ತದೆ, ನಾವು ರಾಗಿ ಮತ್ತು ಭತ್ತ ಬೆಳೆಯುತ್ತೇವೆ. ನ್ಯಾಯಾಲಯದ ಮುಂದೆ ಇರುವ 1 ರಿಂದ 5ನೇ ಆರೋಪಿತರೂ ಸಹ ನಮಗೆ ಸಂಬಂಧಿರು.

2. ಈ ಕೇಸಿಗೆ ಸಂಬಂಧಪಟ್ಟಂತೆ ನಡೆದಿರುವ ಘಟನೆ ನನಗೆ ಗೊತ್ತಿಲ್ಲ. ಯಾವ ಸಮಯದಲ್ಲಿ ಘಟನೆ ನಡೆದಿದೆ ಎಂದರೆ ಬೆಳಗಿನ ಸಮಯದಲ್ಲಿ. ಆಗ ನಾನು ನನ್ನ ಮನೆಯಲ್ಲಿದ್ದೆನು. ಆಗ ಏನು ಘಟನೆ ನಡೆದಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ-1 ದಾರಿಯಲ್ಲಿ ಹೋಗುತ್ತಿದ್ದಾಗ ಆತನ ಕೈಗೆ ನಾನು ಅರಿಶಿನದ ಪುಡಿ ಹಾಕಿದೆನು, ಅಷ್ಟು ಮಾತ್ರ ಗೊತ್ತು, ಆತನ ಬಲಗೈಗೆ

ರಕ್ತಗಾಯವಾಗಿತ್ತು. ಯಾವ ಕಾರಣಕ್ಕಾಗಿ ಎಂದು ನಾನು ಕೇಳಲಿಲ್ಲ ಆತನೂ ಹೇಳಲಿಲ್ಲ. ಚಾಸಾ-1 ರವರ ಜೊತೆ ಬೇರೆ ಯಾರೂ ಇರಲಿಲ್ಲ ಮತ್ತು ಆತನ ಜೊತೆ ಬೇರೆ ಯಾರೂ ಇರಲಿಲ್ಲ. ನಮ್ಮ ಮನೆ ಮತ್ತು ಆರೋಪಿತರ ಮನೆ ಮಧ್ಯೆ ನಾಲ್ಕು ಮನೆಗಳಿರುತ್ತವೆ. ಆಗ ನಾನು ಚಾಸಾ-6 ರವರನ್ನು ನೋಡಲಿಲ್ಲ. ಆರೋಪಿತರು ಮತ್ತು ಚಾಸಾ-1 ರಿಂದ 4 ರವರ ಮಧ್ಯೆ ಸಂಬಂಧ ಹೇಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈಗ ತೋರಿಸಿದ ಮು.ಮ.1 ರ ಕೊಡಲಿಯನ್ನು ನಾನು ನೋಡಿಲ್ಲ, ಅದು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ.

3. ಆರೋಪಿತರು ವಿರುದ್ಧ ಯಾರು ದೂರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರಿಗೆ ಗಾಯವಾಗಿದ್ದ ಬಗ್ಗೆ ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿಸಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕಃ01.01.2019 ರಂದು ಬೆಳಗಿನ 9.00 ಗಂಟೆ ಸಮಯದಲ್ಲಿ ಚಾಸಾ-1 ರಿಂದ 4 ರವರು ಭತ್ತ ತೆಗೆದುಕೊಂಡು ಹೋಗುತ್ತಿದ್ದಾಗ 3 ನೇ ಆರೋಪಿಯ ಮನೆ ಮುಂದೆ ನಾನು ನಿಂತಿದ್ದಾಗ ಆರೋಪಿತರು ಏಕಾಏಕಿ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಅಲ್ಲಿ ಭತ್ತ ತೆಗೆದುಕೊಂಡು ಹೋಗಬೇಡಿರಿ ಎಂದು ಚಾಸಾ-1 ರವರೊಂದಿಗೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ-1 ರಿಂದ 4 ಬೇರೆ ದಾರಿಯಲ್ಲಿ ಹೋಗಲು ಪ್ರಯತ್ನ ಮಾಡಿದಾಗ ಆರೋಪಿತರು ಅವರನ್ನು ಅಡ್ಡಗಟ್ಟಿದರು ಮತ್ತು 1 ನೇ ಆರೋಪಿ ಮು.ಮ.1 ಕೊಡಲಿಯಿಂದ ಚಾಸಾ-1 ರವರ ಬಲಗೈಗೆ ಹೊಡೆದು ರಕ್ತಗಾಯಪಡಿಸಿದನು ಎಂದದೆ ಸರಿಯಲ್ಲ. 1 ನೇ ಆರೋಪಿ ಚಾಸಾ-2 3 ರವರಿಗೆ ಕೈಗಳಿಂದ ಹೊಡೆದನು ಎಂದರೆ ಸರಿಯಲ್ಲ. 2 ಮತ್ತು 5 ನೇ ಆರೋಪಿತರು ಚಾಸಾ-4 ರವರಿಗೆ ಮುಂದಲೆ ಹಿಡಿದು ಎಳೆದು ಬೈದಾಡಿದರು ಎಂದರೆ ಸರಿಯಲ್ಲ. 1 ಮತ್ತು 4 ನೇ ಆರೋಪಿತರು ಚಾಸಾ-4

ರವರಿಗೆ ಬಲವಾಗಿ ಕೈಗಳಿಂದ ಹೊಡೆದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ-6 ಜಗಳ ಬಿಡಿಸಿ ಸಮಾಧಾನ ಪಡಿಸಿದೆವು ಎಂದರೆಸ ರಿಯಲ್ಲ. ಇನ್ನೊಮ್ಮೆ ಈ ದಾರಿಯಲ್ಲಿ ಬಂದರೆ ಕೊಲೆ ಮಾಡುತ್ತೇವೆ ಎಂದು ಆರೋಪಿತರು ಚಾಸಾ-1 ರಿಂದ 4 ರವರಿಗೆ ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.

2. ಈಗ ಓದಿ ಹೇಳಿದ ರೀತಿ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಗ್ರಾಮದವರಾಗಿರುವುದರಿಂದ ಮತ್ತು ನಮ್ಮ ಸಂಬಂಧಿಕರಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಬಿ.ಆರ್. ವಕೀಲರಿಂದಃ</u>

ಚಾಸಾ-1 ರವರಿಗೆ ಗಾಯವಾಗಿರಲಿಲ್ಲ ಎಂದರೆ ಸುಳ್ಳು. ಚಾಸಾ-1 ರವರ ಕೈಗೆ ಅರಿಶಿಣ ಹಾಕಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು<br>ಸತ್ರ ನ್ಯಾಯಾಧೀಶರು, ಮಂಡ್ಯ.